ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
**ದಿನಾಂಕ:14.12.2016**

**ವಿಷಯ:** ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಮತ್ತು ನಿಯಮಗಳು 1960ರ ನಿಯಮ 2(ಐ-1) ಮತ್ತು 13ಬಿಬಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳ 2004ರ ನಿಯಮ2(ಜಿ-2)ರಂತೆ ದಿನಾಂಕ:01/01/2017 ರಿಂದ ದಿನಾಂಕ:31/12/2017ರವರೆಗಿನ ಅವಧಿಯಲ್ಲಿ ಪದಾವಧಿ ಮುಗಿಯಲಿರುವ ಎಲ್ಲಾ ರೀತಿಯ ಮಾಧ್ಯಮಿಕ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂ.ವ್ಯಾಶಾಇ/58/ಶಾಸನ/2014 ದಿನಾಂಕ 06.09.2014 ಮತ್ತು ಸಂಖ್ಯೆ: ಸಿಒ 226 ಸಿಎಲ್ಎಂ 2014 ದಿನಾಂಕ 06.06.2015
2. ಸರ್ಕಾರದ ಪತ್ರ ಸಂಖ್ಯೆ:ಸಿಒ 217 ಸಿಎಲ್ಎಂ 2015 ದಿನಾಂಕ 7.12.2015 ಮತ್ತು ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ:ಅರ್ಎಸ್ಆರ್/ಎಕ್ಸ್ಎಂಸಿ/ಚುನ.ನೇ/124/2015-16 ದಿನಾಂಕ:08.12.2015
3. ಸಹಕಾರ ಚುನಾವಣಾ ಪ್ರಾಧಿಕಾರದ ಸುತ್ತೋಲೆ ಸಂಖ್ಯೆ: ಸಚುಪ್ರಾ/ಮ.ಪಟ್ಟಿ/02/2015 ದಿನಾಂಕ:14.12.2015
4. ಪ್ರಾಧಿಕಾರದ ಆದೇಶ **ಸಂಖ್ಯೆ: ಸಚುಪ್ರಾ/ಚುಅನೇ**/ಮಾಧ್ಯಮಿಕ/ **04/2016 ,ದಿನಾಂಕ: 16.01.2016.**

★★★

**ಪ್ರಸ್ತಾವನೆ:**

2011 ರ ಭಾರತದ ಸಂವಿಧಾನದ 97ನೇ ತಿದ್ದುಪಡಿಯಂತೆ 2012ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆ ತಿದ್ದುಪಡಿ ತರಲಾಗಿರುತ್ತದೆ. ಅದರಂತೆ 2013ರಲ್ಲಿ ಚುನಾವಣಾ ಆಯೋಗವು ರಚನೆಯಾಗಿರುತ್ತದೆ. ಭಾರತದ ಸಂವಿಧಾನದ 97ನೇ ತಿದ್ದುಪಡಿ ಅನುಚ್ಛೇದ 243ZK ನಲ್ಲಿ ರಾಜ್ಯ ವಿಧಾನಮಂಡಳವು ರೂಪಿಸುವ ಕಾನೂನಿನಲ್ಲಿ ಯಾವುದೇ ಸಹಕಾರ ಸಂಘದ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧ ಮತದಾರರ ಪಟ್ಟಿ ತಯಾರಿಸುವ ಮೇಲುಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣಗಳು ಅದಕ್ಕಾಗಿ ರಚಿಸಲ್ಪಟ್ಟ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು ಎಂದು ಉಪಬಂಧಿಸಲಾಗಿದೆ.

ಸಹಕಾರ ಸಂಘ/ಸಹಕಾರಿಯ ಆಡಳಿತ ಮಂಡಲಿಗಳಿಗೆ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಮುಖಾಂತರ ಮುಕ್ತ, ನ್ಯಾಯೋಚಿತ ಹಾಗೂ ಪಾರದರ್ಶಕತೆಯಿಂದ ನಡೆಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39 ಕ್ಕೆ 2013ರ ತಿದ್ದುಪಡಿ ಮಾಡಿ 39ಎ ಸೇರ್ಪಡೆ ಮಾಡಿರುತ್ತದೆ, ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ಕ್ಕೆ ತಿದ್ದುಪಡಿ ತಂದು ಪ್ರಕರಣ 26ಎ ನ್ನು 2013ರಲ್ಲಿ ಹೊಸದಾಗಿ ಸೇರ್ಪಡೆ ಮಾಡಲಾಗಿದೆ.

ಪ್ರಾಧಿಕಾರವು ಉಲ್ಲೇಖ (4)ರ ಆದೇಶದಲ್ಲಿ 2016ನೇ ಸಾಲಿನಲ್ಲಿ ಮಾಧ್ಯಮಿಕ ಸಹಕಾರ ಸಂಘಗಳಿಗೆ/ಸಹಕಾರಿಗಳಿಗೆ ನಡೆಯುವ ಆಡಳಿತ ಮಂಡಲಿ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಪ್ರಕರಣ 39ಎ ಹಾಗೂ ಪ್ರಕರಣ 39ಎಎ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26 ಮತ್ತು 26ಎ ರಂತೆ ಆಡಳಿತ ಮಂಡಲಿಯ ಸದಸ್ಯರ, ಸಾಮಾನ್ಯ, ಖಾಲಿಬಿದ್ದ ಸ್ಥಾನ ಮತ್ತು ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳಿಗೆ/ಸಹಕಾರಿಗಳಿಗೆ ಚುನಾವಣೆಗಳನ್ನು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ಸಹಕಾರ ಚುನಾವಣಾ ಪ್ರಾಧಿಕಾರದ ಅಧೀಕ್ಷಣೆಗೆ ಒಳಪಟ್ಟು ಅಧಿನಿಯಮ/ನಿಯಮಗಳು ಹಾಗೂ ಉಪವಿಧಿಗಳ ಕಾನೂನಿಗೆ ಅನುಗುಣವಾಗಿ ನಡೆಸತಕ್ಕದ್ದಾಗಿರುತ್ತದೆ.

ಈ ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಪ್ರಕರಣ 39-ಎ(2)ರಂತೆ ನಾಲ್ಕು ಹಂತಗಳಲ್ಲಿ ನಡೆಸತಕ್ಕದ್ದಾಗಿರುತ್ತದೆ. ಅದೇ ರೀತಿಯಲ್ಲಿ 39ಎ(2)(ಸಿ)ರಂತೆ ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳಿಗೆ/ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿರುತ್ತದೆ. ತದನಂತರ, ಉಲ್ಲೇಖ(1)ರ ಅಧಿಸೂಚನೆ ದಿನಾಂಕ: 06-09-2014 ರಲ್ಲಿ 39ಎ ಗೆ ತಿದ್ದುಪಡಿ ತಂದಿದ್ದು, ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಗಳ ಸಾಮಾನ್ಯ ಚುನಾವಣೆ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಪ್ರಾಧಿಕಾರದ ಅಧೀಕ್ಷಣೆಯಲ್ಲಿ ನಡೆಸತಕ್ಕದ್ದಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960(2015ರ ತಿದ್ದುಪಡಿ)ರ ನಿಯಮ-13ಡಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ (2015ರ ತಿದ್ದುಪಡಿ) ನಿಯಮ-5ಬಿ(3)ಗಳಂತೆ ಚುನಾವಣಾಧಿಕಾರಿಯು ಕೂಲಂಕುಷ ಪರಿಶೀಲನೆಯ ನಂತರ, ಆಡಳಿತ ಮಂಡಲಿಗಳ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಕನಿಷ್ಟ 120 ದಿನಗಳ ಪೂರ್ವದಲ್ಲಿ ಈ ಕೆಳಕಂಡ ವಿವರಗಳನ್ನೊಳಗೊಂಡ, ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ರೀತಿಯ ಮಾಧ್ಯಮಿಕ ಸಹಕಾರ ಸಂಘಗಳ/ ಸಹಕಾರಿಗಳ ದೃಢೀಕೃತ ಮಾಹಿತಿಯನ್ನು ನಮೂನೆ 13ಡಿ(1)ರಂತೆ ಉಲ್ಲೇಖ(3)ರ ಪ್ರಾಧಿಕಾರದ ಸುತ್ತೋಲೆಯಂತೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದಾಗಿದೆ.

1. ಸಹಕಾರ ಸಂಘದ /ಸಹಕಾರಿಯ ಹೆಸರು ಮತ್ತು ವಿಳಾಸ
2. ಆಡಳಿತ ಮಂಡಲಿಗೆ ಆಯ್ಕೆಯಾಗಬೇಕಾಗಿರುವ ಚುನಾಯಿತ ನಿರ್ದೇಶಕರ ಸಂಖ್ಯೆ.
3. ಆಡಳಿತ ಮಂಡಲಿ ಪದಾವಧಿಯು ಮುಕ್ತಾಯವಾಗುವ ದಿನಾಂಕ
4. ಚುನಾವಣಾ ಪ್ರಾಧಿಕಾರಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳು

ಅದರಂತೆ, ದಿನಾಂಕ:01/01/2017 ರಿಂದ ದಿನಾಂಕ:31/12/2017ರವರೆಗೆ ಆಡಳಿತ ಮಂಡಲಿ ಪದಾವಧಿ ಮುಕ್ತಾಯವಾಗಲಿರುವ **ಮಾಧ್ಯಮಿಕ** ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಯ ಸದಸ್ಯರ, ಸಾಮಾನ್ಯ, ಖಾಲಿಬಿದ್ದ ಸ್ಥಾನ ಮತ್ತು ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳಿಗೆ/ಸಹಕಾರಿಗಳಿಗೆ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸಲು ನಿಯಮಾನುಸಾರ ಮತದಾರರ ಪಟ್ಟಿ ತಯಾರಿಸಲು ಚುನಾವಣಾ ಪ್ರಾಧಿಕಾರವು ಚುನಾವಣಾ ಪೂರ್ವ ಸಿದ್ಧತಾ ಕಾರ್ಯವನ್ನು 06 ತಿಂಗಳ ಪೂರ್ವದಲ್ಲಿ ಪ್ರಾರಂಭಿಸಬೇಕಾಗಿರುತ್ತದೆ. ಆದಕಾರಣ ಚುನಾವಣಾಧಿಕಾರಿಗಳು ಮೇಲಿನ ಕಂಡಿಕೆಯಲ್ಲಿ ವಿವರಿಸಿರುವ 13ಡಿ(1)ರ ಮಾಹಿತಿಯನ್ನು ಚುನಾವಣಾ ಪ್ರಾಧಿಕಾರಕ್ಕೆ ಸಕಾಲಕ್ಕೆ ತಪ್ಪದೇ ಸಲ್ಲಿಸತಕ್ಕದ್ದಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ (2015ರ ತಿದ್ದುಪಡಿ) ನಿಯಮ 2(ಐ-1) ಮತ್ತು ನಿಯಮ 13ಬಿಬಿ ಮತ್ತು 13ಇ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ) ನಿಯಮ 2(ಜಿ-2)ಗಳಂತೆ, ಚುನಾವಣಾಧಿಕಾರಿಗಳಾಗಿ ಎರಡನೇ ಹಂತದ ಮಾಧ್ಯಮಿಕ ಸಹಕಾರ ಸಂಘಗಳ/ಸಹಕಾರಿಗಳ

--3

ಆಡಳಿತ ಮಂಡಲಿಯ ಸದಸ್ಯರ, ಸಾಮಾನ್ಯ, ಖಾಲಿಬಿದ್ದ ಸ್ಥಾನ ಮತ್ತು ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳು/ಸಹಕಾರಿಗಳ ಚುನಾವಣೆಯನ್ನು ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

## ಆದೇಶ

**ಸಂಖ್ಯೆ: ಸಚುಪ್ರಾ/ಚು.ಅ.ನೇ/ಮಾಧ್ಯಮಿಕ/04/2016** ದಿನಾಂಕ **14.12.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ (2015ರ ತಿದ್ದುಪಡಿ) ನಿಯಮ 2(ಐ-1) ಮತ್ತು ನಿಯಮ 13ಬಿಬಿ ರಂತೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ (2015ರ ತಿದ್ದುಪಡಿ) ನಿಯಮ 2(ಜಿ-2) ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಎನ್.ಸಿ. ಮುನಿಯಪ್ಪ, ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತನಾದ ನಾನು, **ರಾಜ್ಯದ ನಾಲ್ಕು ಪ್ರಾಂತಗಳ ಪ್ರಾಂತೀಯ ಜಂಟಿ ನಿಬಂಧಕರನ್ನು ಅವರ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾಧ್ಯಮಿಕ ಸಹಕಾರ ಸಂಘಗಳಿಗೆ/ಸಹಕಾರಿಗಳಿಗೆ ನಡೆಯುವ ಆಡಳಿತ ಮಂಡಲಿ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ಚುನಾವಣಾಧಿಕಾರಿಗಳನ್ನಾಗಿ ಮುಂದಿನ ಆದೇಶದವರೆಗೆ ನೇಮಿಸಿರುತ್ತೇನೆ.**

ಚುನಾವಣಾಧಿಕಾರಿಗಳು ಮಾಧ್ಯಮಿಕ ಸಹಕಾರ ಸಂಘಗಳು / ಸಹಕಾರಿಗಳ ಪಟ್ಟಿಯನ್ನು ಮತ್ತು ರಿಟರ್ನಿಂಗ್ ಅಧಿಕಾರಿಗಳನ್ನಾಗಿ ನೇಮಿಸಲು ಎರಡು ಸೂಕ್ತ ಹೆಸರುಗಳನ್ನು ಪ್ರಾಧಿಕಾರಕ್ಕೆ ಕಳುಹಿಸಿ ಪ್ರಾಧಿಕಾರದಿಂದ ರಿಟರ್ನಿಂಗ್ ಅಧಿಕಾರಿ ನೇಮಕಾತಿ ಆದೇಶ ಪಡೆಯತಕ್ಕದ್ದು.

ಚುನಾವಣಾಧಿಕಾರಿಗಳು **ಮಾಧ್ಯಮಿಕ** ಸಹಕಾರ ಸಂಘಗಳು / ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಸಲ್ಲಿಸಿದ ಮತದಾರರ ಪಟ್ಟಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲಿಸಿ ಸಿದ್ದಪಡಿಸಲು ಹಾಗೂ ಮತ ನೀಡುವ ಹಕ್ಕುಳ್ಳ / ಸುಸ್ತಿದಾರರ ಕರಡು ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಠ 45 ದಿನಗಳ ಮುಂಚಿತವಾಗಿ ಪ್ರಕಟಿಸಿ, ಆಕ್ಷೇಪಣೆ ಕರೆಯುವುದು, ಅಂತಿಮ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ 15 ದಿನಗಳ ಪೂರ್ವದಲ್ಲಿ ಪ್ರಕಟಿಸತಕ್ಕದ್ದು. ಅವುಗಳ ಪ್ರತಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿ ಕೊಡತಕ್ಕದ್ದು.

ಅಲ್ಲದೆ ಪ್ರತಿ **ಮಾಧ್ಯಮಿಕ** ಸಹಕಾರ ಸಂಘದ / ಸಹಕಾರಿಯ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಮತದಾರರ ಹಕ್ಕನ್ನು ಹೊಂದಿರದ ಇತರ ಸದಸ್ಯರ ಕರಡು ಪಟ್ಟಿಗಳನ್ನು ಹಾಗೂ ಮತದಾರರ ಅಂತಿಮ ಪಟ್ಟಿ ಮತ್ತು ಚುನಾವಣಾ ವೇಳಾಪಟ್ಟಿಗಳನ್ನು ಸಂಬಂಧಪಟ್ಟ **ಮಾಧ್ಯಮಿಕ** ಸಹಕಾರ ಸಂಘದ/ಸಹಕಾರಿಯ ಮತ್ತು ಅದರ ಶಾಖೆಗಳ ಸೂಚನಾಫಲಕಗಳಲ್ಲಿ, ಸಹಕಾರ ಇಲಾಖೆಯ ಸ್ಥಳೀಯ ಕಛೇರಿಯಲ್ಲಿ, ಸಹಕಾರ ಸಂಘದ/ಸಹಕಾರಿಯ ಜಾಲತಾಣದಲ್ಲಿ (ಇದ್ದಲ್ಲಿ) ಹಾಗೂ ಸಹಕಾರ ಸಂಘದ/ಸಹಕಾರಿಯ ಸದಸ್ಯರಿಗೆ ತಲುಪಲು ಅವಕಾಶವಿರುವಂತಹ ಇತರ ಸ್ಥಳಗಳಲ್ಲಿ ಪ್ರಕಟಿಸತಕ್ಕದ್ದು. ಅವುಗಳ ಪ್ರತಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿ ಕೊಡತಕ್ಕದ್ದು.

ಚುನಾವಣಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಗೆ ಬರುವಂತಹ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ಈ ಆದೇಶಕ್ಕೆ ಲಗತ್ತಿಸಿರುವ

--4

ಅನುಬಂಧ ಮತ್ತು ಚೆಕ್‌ಲಿಸ್ಟ್‌ನಂತೆ ಹಾಗೂ ಪ್ರಾಧಿಕಾರದಿಂದ ಕಾಲಕಾಲಕ್ಕೆ ನೀಡಲಾದ ಸುತ್ತೋಲೆ/ಅಧಿಸೂಚನೆ/ಮಾರ್ಗಸೂಚಿಗಳನ್ನು ಅನುಸರಿಸಿ ಚುನಾವಣೆಗಳನ್ನು ನಿಯಮಾನುಸಾರ, ಪಾರದರ್ಶಕವಾಗಿ ನಿಷ್ಪಕ್ಷಪಾತದಿಂದ ನಡೆಸಲು ಆದೇಶಿಸಿದೆ.

(ಎನ್.ಸಿ. ಮುನಿಯಪ್ಪ)
**ಆಯುಕ್ತರು,**
**ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು**

ಗೆ:

ಚುನಾವಣಾಧಿಕಾರಿ
ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು,
..........................................ಪ್ರಾಂತ

**<u>ಪ್ರತಿಗಳು:-</u>**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು-01.
2. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52
3. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರು / ಜಂಟಿ ನಿಬಂಧಕರುಗಳಿಗೆ
4. ಸಹಕಾರ ಸಂಘಗಳ ಅಪರ ನಿಬಂಧಕರು, ಕಾಡಾ, ಬೆಳಗಾವಿ
5. ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾಡಾ, ಕಲಬುರಗಿ
6. ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು,
7. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
8. ರಾಜ್ಯದ ಎಲ್ಲಾ ಜಿಲ್ಲೆಗಳ ಆರಕ್ಷಕ ಅಧೀಕ್ಷಕರಿಗೆ
9. ರಾಜ್ಯದ ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು,

<u>ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶ</u>
ಸಂಖ್ಯೆ: ಸಚುಪ್ರಾ/ಚು.ಅ.ನೇ/ಮಾಧ್ಯಮಿಕ/ 04 /2016 ದಿನಾಂಕ:14.12.2016ಕ್ಕೆ

## <u>ಅನುಬಂಧ</u>

1. **ಮಾಧ್ಯಮಿಕ** ಸಹಕಾರ ಸಂಘಗಳ/ಸಹಕಾರಿಗಳ ಮಂಡಲಿಗಳ ಸಾಮಾನ್ಯ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ರಲ್ಲಿ **ಮಾಧ್ಯಮಿಕ** ಸಂಘಗಳ/ಸಹಕಾರಿಗಳ ನೋಂದಾಯಿತ ಉಪವಿಧಿಗಳನ್ವಯ ಹಾಗೂ ಸಹಕಾರ ಚುನಾವಣಾ ಪ್ರಾಧಿಕಾರದ ನಿರ್ದೇಶನ / ಮಾರ್ಗಸೂಚಿಗಳನ್ವಯ ನಡೆಸುವ ಬಗ್ಗೆ ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದಾಗಿರುತ್ತದೆ.
2. ಸಹಕಾರ ಚುನಾವಣಾ ಪ್ರಾಧಿಕಾರವು ಸಾಮಾನ್ಯ/ಪದಾಧಿಕಾರಿಗಳ/ರಿಕ್ತಸ್ಥಾನಗಳಿಗೆ ಚುನಾವಣೆಗಳನ್ನು ನಡೆಸುವ ಸಂಬಂಧವಾಗಿ ಈಗಾಗಲೇ ಅಧಿಸೂಚನೆ / ಆದೇಶ ಮತ್ತು ಸುತ್ತೋಲೆಗಳನ್ನು ಹೊರಡಿಸಿದ್ದು ಅವುಗಳನ್ನು ಪತ್ರ / ಇ-ಮೇಲ್ ಮೂಲಕ ಎಲ್ಲಾ ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸಲಾಗಿದೆ ಹಾಗೂ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
3. ಪ್ರಾಧಿಕಾರವು **ಮಾಧ್ಯಮಿಕ** ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಚೆಕ್‌ಲಿಸ್ಟ್‌ನಲ್ಲಿ ವಿವರಿಸಿರುವಂತೆ ಕ್ರಮವಿಡತಕ್ಕದ್ದು.
4. ಸದಸ್ಯರ ಮತದಾನದ ಅರ್ಹತೆ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ-20, ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ಹಾಗೂ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ರಲ್ಲಿ ಹಾಗೂ ಸಂಬಂಧಿಸಿದ ಸಂಘಗಳ/ಸಹಕಾರಿಗಳ ಉಪವಿಧಿಗಳನ್ನು ಗಮನದಲ್ಲಿಟ್ಟುಕೊಂಡು ಮತದಾರರ ಪಟ್ಟಿಯನ್ನು ತಯಾರಿಸತಕ್ಕದ್ದು.
5. ಸಹಕಾರ ಸಂಘದ/ಸಹಕಾರಿಯ ಸದಸ್ಯತ್ವ /ಮತದಾನದ ಹಕ್ಕು ಸಾಧಿಸುವ ಸಂಬಂಧ ಯಾವುದೇ ನ್ಯಾಯಾಲಯದಲ್ಲಿ ವಿವಾದ /ವ್ಯಾಜ್ಯಗಳಿದ್ದು, ನ್ಯಾಯಾಲಯದಿಂದ ಯಾವುದೇ ಮಧ್ಯಂತರ ಆದೇಶಗಳಿದ್ದಲ್ಲಿ ಆ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮವಿಡುವುದು, ವಿವಾದಗಳು ಇತ್ಯರ್ಥವಾಗಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ಸಂಬಂಧಿಸಿದ ಸಂಘವು/ಸಹಕಾರಿಯು ಅಗತ್ಯ ಕ್ರಮವಿಟ್ಟಿರುವುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು.
6. ಚುನಾವಣೆಗಳಿಗಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಿಸಿದ ಸಂಘಗಳು/ಸಹಕಾರಿಗಳು ಭರಿಸತಕ್ಕದ್ದಾಗಿದೆ. [ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ-39ಎಎ(14) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-5ಎಎಫ್ ರಂತೆ]
7. ಮತದಾರರ ಪಟ್ಟಿಯನ್ನು ಚುನಾವಣಾಧಿಕಾರಿಯು ಸಿದ್ದಪಡಿಸುವ ಸಂಬಂಧ ಸರಿಯಾದ ಮಾಹಿತಿ / ದಾಖಲೆಯನ್ನು ಒದಗಿಸುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘಗಳ/ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯದ್ದಾಗಿರುತ್ತದೆ. [ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ-39ಎಎ(15) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ನಿಯಮ 13ಸಿ(2) ಮತ್ತು 13-ಡಿ(4)] [ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-5ಬಿ]

--6

8. ಸಹಕಾರ ಸಂಘದ/ಸಹಕಾರಿಯ ಮತದಾನದ ಹಕ್ಕುಳ್ಳ ಮತದಾರರ / ಡೆಲಿಗೇಟ್‌ಗಳ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಮತದಾನಕ್ಕೆ ಅರ್ಹತೆ ಹೊಂದಿರದ ಇತರೆ ಸದಸ್ಯರ ಪಟ್ಟಿ (ಕಾರಣಗಳನ್ನು ನಮೂದಿಸಿ) ಹಾಗೂ ಸುಸ್ತಿಯಾಗುವವರ ಕರಡು ಪಟ್ಟಿಯನ್ನು ಸಿದ್ದಪಡಿಸುವ ಜವಾಬ್ದಾರಿ ಪ್ರತಿ ಸಂಘದ /ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನದ್ದಾಗಿರುತ್ತದೆ. ಈ ರೀತಿಯ ಪಟ್ಟಿಗಳನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಠ 60 ದಿವಸಗಳು ಮುಂಚಿತವಾಗಿ ಚುನಾವಣಾಧಿಕಾರಿಗಳಿಗೆ ದಾಖಲಾತಿಗಳ ಸಹಿತ ಸಲ್ಲಿಸಬೇಕಾಗಿರುತ್ತದೆ. ಚುನಾವಣಾಧಿಕಾರಿಯು ಸಂಬಂಧಿಸಿದ ಸಂಘಗಳು/ ಸಹಕಾರಿಗಳು ಸಲ್ಲಿಸುವ ಮೇಲ್ಕಂಡ ಪಟ್ಟಿಗಳನ್ನು ನಿಯಮಾನುಸಾರ ಪರಿಶೀಲಿಸಿ ಅರ್ಹಮತದಾರರ ಪಟ್ಟಿ ಸಿದ್ದಪಡಿಸುವುದು ಮತ್ತು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಅಧಿನಿಯಮ / ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮಗಳನ್ವಯ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರನ್ವಯ ಅಗತ್ಯ ಕ್ರಮವಿಡಬೇಕಾಗಿರುತ್ತದೆ. ಈ ಸಂಬಂಧ ಚುನಾವಣಾಧಿಕಾರಿಯು ಮತದಾರರ ಪಟ್ಟಿಯನ್ನು ನಿಯಮಾನುಸಾರ ಪರಿಶೀಲಿಸಲು ಆ ಪ್ರಕಾರ ಸರಿಯಾದ ಅರ್ಹ ಮತದಾರರ ಪಟ್ಟಿ ತಯಾರಿಸಲು ಅವಶ್ಯಕತೆಗನುಗುಣವಾಗಿ ಸೂಕ್ತ ಮೇಲ್ವಿಚಾರಣೆ ತಂಡವನ್ನು ರಚಿಸಬಹುದಾಗಿದೆ.

9. ಪ್ರತಿಯೊಂದು **ಮಾಧ್ಯಮಿಕ** ಸಹಕಾರ ಸಂಘದ / ಸಹಕಾರಿಯ ಮಂಡಲಿಯ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು ಸಹಕಾರ ಚುನಾವಣಾ ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಟ್ಟ ಚುನಾವಣಾಧಿಕಾರಿಗೆ ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡಬೇಕಾಗಿರುತ್ತದೆ.

10. ಮತದಾರರ ಪಟ್ಟಿಯನ್ನು ಸಂಘದ/ಸಹಕಾರಿಯ ಬೈಲಾದಲ್ಲಿರುವಂತೆ ಮತದಾರರ ಪ್ರತ್ಯೇಕ ಕ್ಷೇತ್ರಗಳಿದ್ದಲ್ಲಿ ಕ್ಷೇತ್ರವಾರು ಸಿದ್ದಪಡಿಸಬೇಕಾಗಿರುತ್ತದೆ. ಮತದಾರರ ಪಟ್ಟಿಯಲ್ಲಿ ಸದಸ್ಯರ ಹೆಸರು / ಸದಸ್ಯರ ತಂದೆ /ತಾಯಿ ಹೆಸರು ಅಥವಾ ಪತಿಯ ಹೆಸರು, ವಿಳಾಸ, ಸದಸ್ಯತ್ವ /ಪ್ರವೇಶತ್ವ ಸಂಖ್ಯೆ, ಗುರುತಿನ ಕಾರ್ಡ್ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು.

11. ಅಂತಿಮ ಮತದಾರರ ಪಟ್ಟಿಯು **ಮಾಧ್ಯಮಿಕ** ಸಹಕಾರ ಸಂಘದ/ಸಹಕಾರಿಯ ಸಂಬಂಧದಲ್ಲಿ ಮತದಾನ ಮಾಡಲು ಅರ್ಹತೆ ಹೊಂದಿದ ಸದಸ್ಯ ಸಂಘಗಳ ಡೆಲಿಗೇಟ್‌ನ ವಿವರಗಳನ್ನುಳ್ಳ ಪಟ್ಟಿಯಾಗಿರುತ್ತದೆ. ಪ್ರತಿ ಸಹಕಾರ ಸಂಘ/ಸಹಕಾರಿಯು ಅಂಥ ಮತದಾರರ ಪಟ್ಟಿಯ ಪ್ರತಿಯನ್ನು ಸಂಘದ/ಸಹಕಾರಿಯ ಕಛೇರಿಯಲ್ಲಿ ಮತ್ತು ಚುನಾವಣಾಧಿಕಾರಿಗಳ ಕಛೇರಿಯಲ್ಲಿ ಪ್ರಕಟಿಸಿ ವೀಕ್ಷಣೆಗೆ ಮುಕ್ತವಾಗಿಟ್ಟಿರತಕ್ಕದ್ದು.

12. ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಗೆ /ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಚುನಾವಣಾಧಿಕಾರಿಯು ಕಾನೂನಿಗೆ ಅನುಗುಣವಾಗಿ ಸಹಕಾರ ಚುನಾವಣಾ ಪ್ರಾಧಿಕಾರದ ಪರವಾಗಿ ಕಾರ್ಯನಿರ್ವಹಿಸುವ ಸಂಬಂಧ ಆಗಾಗ್ಗೆ ಪ್ರಾಧಿಕಾರವು ನೀಡುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಲು ಸೂಚಿಸಿದೆ.

(ಎನ್.ಸಿ. ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ
ಬೆಂಗಳೂರು.

## ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ/ಪದಾಧಿಕಾರಿಗಳ ಸ್ಥಾನಗಳಿಗೆ ಸಾಮಾನ್ಯ ಚುನಾವಣೆ ನಡೆಸುವಿಕೆ – ಹಂತ ಹಂತವಾಗಿ ನಿಯಮಾನುಸಾರ ಚುನಾವಣಾಧಿಕಾರಿಯು ಕ್ರಮವಿಡುವ ಬಗ್ಗೆ

## ಚೆಕ್‌ಲಿಸ್ಟ್

**ಸಂಖ್ಯೆ:ಸಚುಪ್ರಾ/ಚುಅನೇ/ಮಾಧ್ಯಮಿಕ/ 04/2016** **ದಿನಾಂಕ: 14.12.2016**

| ಕ್ರಸಂ | ವಿವರ | ಷರಾ |
|---|---|---|
| 1 | **ಮಾಧ್ಯಮಿಕ** ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸಿರುವುದು | ದಿನಾಂಕ 30.05.2017 ಮತ್ತು 31.05.2017 ಈ ದಿನಾಂಕಗಳ ಪೈಕಿ ಚುನಾವಣಾಧಿಕಾರಿಗೆ ಸೂಕ್ತವೆನಿಸುವ ಯಾವುದೇ ದಿನಾಂಕದಂದು ಚುನಾವಣೆ ನಿಗಧಿಪಡಿಸತಕ್ಕದ್ದು. |
| 2 | ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಕರಡುಪಟ್ಟಿಯನ್ನು ದಾಖಲಾತಿಗಳ ಸಹಿತ ಸಂಬಂಧಿಸಿದ **ಮಾಧ್ಯಮಿಕ** ಸಹಕಾರ ಸಂಘದ/ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಚುನಾವಣಾಧಿಕಾರಿಗೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಟ 60 ದಿನಗಳ ಮುಂಚಿತವಾಗಿ ಸಲ್ಲಿಸುವಿಕೆ ಬಗ್ಗೆ.<br>[ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-5ಬಿ ರಂತೆ] | ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 60 ದಿನಗಳ ಮುಂಚೆ ಚುನಾವಣಾಧಿಕಾರಿಗೆ ಸಂಘದ/ಸಹಕಾರಿಯ ಮುಖ್ಯಕಾರ್ಯ ನಿರ್ವಾಹಕನು ನಿಯಮಾನುಸಾರ ಸಲ್ಲಿಸಬೇಕಾಗಿರುತ್ತದೆ. |
| 3 | ಮೇಲೆ ನಮೂದಿಸಲಾದ ಕಂಡಿಕೆ (2) ರಲ್ಲಿ ವಿವರಿಸಿರುವಂತೆ ಕರಡು ಮತದಾರರ ಮತ್ತು ಡೆಲಿಗೇಟ್‌ಗಳ ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಮತ್ತು ಡೆಲಿಗೇಟ್‌ಗಳ ಪಟ್ಟಿಯ ಸಂಬಂಧ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚಿತವಾಗಿ ಚುನಾವಣಾಧಿಕಾರಿಯು (ಇ.ಓ) ಪ್ರಕಟಿಸಬೇಕಾಗಿರುತ್ತದೆ. [ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-5(ಬಿ)ಗಳನ್ವಯ] | ಚುನಾವಣೆ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚೆ ಚುನಾವಣಾಧಿಕಾರಿ ಗಳಿಂದ ಪ್ರಕಟಿಸತಕ್ಕದ್ದು. |
| 4 | ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸುವುದು. [ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5ಬಿರಂತೆ] ಅಂತಿಮ ಮತದಾರರ ಪಟ್ಟಿಯು ಸದಸ್ಯ ಸಂಘಗಳ ಡೆಲಿಗೇಟ್‌ಗಳ ವಿವರಗಳನ್ನು ಒಳಗೊಂಡಿರತಕ್ಕದ್ದು. | ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಚುನಾವಣಾಧಿಕಾರಿಗಳಿಂದ ಪ್ರಕಟಿಸತಕ್ಕದ್ದು. |
| 5 | ಸಹಕಾರ ಚುನಾವಣಾ ಪ್ರಾಧಿಕಾರವು ಸಹಕಾರ ಸಂಘಗಳಿಗೆ ಚುನಾವಣೆ ನಡೆಸಲು ನಿಗಧಿಪಡಿಸಿರುವ ಅಧಿಸೂಚನೆಯಂತೆ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14ರಂತೆ ಚುನಾವಣಾಧಿಕಾರಿಯು ನಮೂನೆ XI ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-5-ಇ ರಂತೆ ನಮೂನೆ-1-ಎ ರಲ್ಲಿ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ. | ಚುನಾವಣಾಧಿಕಾರಿಗಳಿಂದ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5-ಇ ರನ್ವಯ ಸಾಮಾನ್ಯ ಚುನಾವಣಾ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |

--8

| | | |
|---|---|---|
| 6 | ಕಂಡಿಕೆ 5ರಲ್ಲಿ ವಿವರಿಸಿದಂತೆ ಚುನಾವಣಾಧಿಕಾರಿಯು ಅಧಿಸೂಚನೆ ಹೊರಡಿಸಿದ ನಂತರ ಉದ್ದೇಶಿತ ಚುನಾವಣೆಗಾಗಿ ರಿಟರ್ನಿಂಗ್ ಅಧಿಕಾರಿ ನಮೂನೆ XII ಮತ್ತು ನಮೂನೆ-2-ಎ ರಲ್ಲಿ ಸಾರ್ವಜನಿಕ ನೋಟೀಸ್ ನೀಡುವಿಕೆ. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14 (3) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5-ಇ(3)ರಂತೆ ರಿಟರ್ನಿಂಗ್ ಅಧಿಕಾರಿಯು ಅಗತ್ಯ ಕ್ರಮವಿಡುವ ಬಗ್ಗೆ ನಿರ್ದೇಶಿಸುವುದು. |
| 7 | ಆಕಸ್ಮಿಕ ತೆರವಾದ ನಿರ್ದೇಶಕರ /ಪದಾಧಿಕಾರಿಗಳ ಚುನಾವಣೆ. | ಇಂತಹ ಪ್ರಕರಣಗಳಿದ್ದಲ್ಲಿ ಪರಿಶೀಲಿಸಿ ರಿಟರ್ನಿಂಗ್ ಆಫೀಸರ್ ನೇಮಕಾತಿಗೆ ಅಗತ್ಯ ಕ್ರಮ ಕೈಗೊಂಡು ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು. |
| 8 | ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳು | ರಿಟರ್ನಿಂಗ್ ಅಧಿಕಾರಿಯು ಚುನಾವಣಾಧಿಕಾರಿ ಗಳೊಂದಿಗೆ ಸಮಾಲೋಚಿಸಿ ಸೂಕ್ತವಾದ ಮತದಾನ ಕೇಂದ್ರಗಳನ್ನು ಸ್ಥಾಪಿಸಲು ವ್ಯವಸ್ಥೆ ಮಾಡುವುದು. |
| 9 | ಮತದಾನ ಸಿಬ್ಬಂದಿ ನೇಮಕಾತಿ | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13(ಎಫ್) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 2004ರ ನಿಯಮ-5-ಡಿ ರ ಅವಕಾಶದಂತೆ ರಿಟರ್ನಿಂಗ್ ಅಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಅವಶ್ಯವಿರುವ ಪ್ರಿಸೈಡಿಂಗ್ ಅಧಿಕಾರಿಗಳನ್ನು / ಚುನಾವಣಾ ಸಿಬ್ಬಂದಿಗಳನ್ನು ನೇಮಕ ಮಾಡಬಹುದು. |
| 10 | ಚುನಾವಣೆ ನಡೆಸುವ ಸಂಬಂಧ ಅಧಿಕಾರಿ / ಚುನಾವಣಾ ಸಿಬ್ಬಂದಿಗಳಿಗೆ ತರಬೇತಿ ವ್ಯವಸ್ಥೆ | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ / ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997/ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ /ಬೈಲಾ ಅವಕಾಶಗಳ ಸಂಬಂಧ ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡಲು ತರಬೇತಿಗೆ ಚುನಾವಣಾಧಿಕಾರಿ ಅಗತ್ಯ ವ್ಯವಸ್ಥೆ ಮಾಡುವುದು. |
| 11 | ಚುನಾವಣಾ ಫಲಿತಾಂಶ ಘೋಷಣೆ ಮತ್ತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ರಿಟರ್ನ್‌ಗಳನ್ನು ಸಲ್ಲಿಸುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14ವೈ(2) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-5-ಎಡಿ ರನ್ವಯ ರಿಟರ್ನಿಂಗ್ ಅಧಿಕಾರಿ ಕ್ರಮವಿಡುವ ಕುರಿತು ಸೂಚಿಸುವುದು. |
| 12 | ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ಅಭಿರಕ್ಷೆ, ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ, ಹಾಗೂ ವಿಲೇವಾರಿ | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14ಎಬಿ ಯಿಂದ 14ಎಡಿ ವರೆಗೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 5-ಎಜಿ ಯಿಂದ 5-ಎಐ ಗಳ ಅವಕಾಶದಂತೆ ಹಾಗೂ ಸಹಕಾರ ಚುನಾವಣಾ ಪ್ರಾಧಿಕಾರವು ನಿರ್ದೇಶಿಸಿರುವಂತೆ ಕ್ರಮವಿಡುವುದು. |
| 13 | ಪದಾಧಿಕಾರಿಗಳ ಚುನಾವಣೆ | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14ಎಜಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ-6ರ ಅವಕಾಶದಂತೆ ಕ್ರಮವಿಡುವುದು. |
| 14 | ಮಾದರಿ ನೀತಿ ಸಂಹಿತೆ | ಪ್ರಾಧಿಕಾರದಿಂದ ಈಗಾಗಲೇ ಹೊರಡಿಸಿರುವ ಪತ್ರ ಸಂಖ್ಯೆ:ಸಚುಆ/17/ನೀತಿಸಂಹಿತೆ/2013-14 ದಿನಾಂಕ 03-08-2013ರ ರೀತ್ಯಾ ಕ್ರಮವಿಡುವುದು. |

(ಎನ್.ಸಿ. ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ
ಬೆಂಗಳೂರು.